# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 537 |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.07.2023 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಪಾರ್ಕ್ ಗಳ ಒಟ್ಟು ಸಂಖ್ಯೆ ಎಷ್ಟು; | ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 520 ಪಾರ್ಕ್‌ಗಳಿವೆ. |
| ಆ) | ಕಳೆದ 5 ವರ್ಷದಲ್ಲಿ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಳಕೆ ಮಾಡಿರುವ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಪಾರ್ಕ್‌ಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಗೊಳಿಸುವುದಿಲ್ಲ. ಸರ್ಕಾರದ ವಿವಿಧ ಯೋಜನೆಗಳ ಮಾರ್ಗಸೂಚಿಗಳಲ್ಲಿ ಪಾರ್ಕ್ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br><br>**<u>15ನೇ ಹಣಕಾಸು ಆಯೋಗ ಅನುದಾನ: (2020-21 ರಿಂದ 2022-23)</u>**<br><br>15ನೇ ಹಣಕಾಸು ಆಯೋಗದ ಅನುದಾನದಡಿ ತುಮಕೂರು ಮಹಾನಗರಪಾಲಿಕೆಗೆ ಹಂಚಿಕೆಯಾದ ಮುಕ್ತ ಅನುದಾನದಲ್ಲಿ ಶೇ.40 ರಷ್ಟು ಮಹಾನಗರಪಾಲಿಕೆಯ ಅವಶ್ಯಕತೆ ಗನುಗುಣವಾಗಿ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ.<br><br>**<u>14ನೇ ಹಣಕಾಸು ಆಯೋಗದ ಅನುದಾನ : (2015-16 ರಿಂದ 2019-20)</u>**<br><br>14ನೇ ಹಣಕಾಸು ಆಯೋಗದ ಅನುದಾನದಡಿ ತುಮಕೂರು ಮಹಾನಗರಪಾಲಿಕೆಗೆ ಹಂಚಿಕೆಯಾದ ಅನುದಾನದಲ್ಲಿ ಗರಿಷ್ಠ ಶೇ.40 ರಷ್ಟು ಮೀರದಂತೆ, ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ. |

<table>
<tr>
<td></td>
<td></td>
<td>ತುಮಕೂರು ಮಹಾನಗರಪಾಲಿಕೆಯು ಕಳೆದ 5 ವರ್ಷಗಳಲ್ಲಿ 14 ಮತ್ತು 15ನೇ ಹಣಕಾಸು ಆಯೋಗದ ಅನುದಾನದಡಿ ಪಾರ್ಕ್‌ಗಳ ಅಭಿವೃದ್ಧಿಗಾಗಿ ಬಳಕೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ಕ್ರ.ಸಂ</th><th>ವರ್ಷ</th><th>ಮೀಸಲಿರಿಸಿದ ಮೊತ್ತ</th><th>ಬಳಕೆಯಾದ ಮೊತ್ತ</th></tr>
<tr><td>1</td><td>2017-2018</td><td>51.21</td><td>51.26</td></tr>
<tr><td>2</td><td>2018-2019</td><td>59.24</td><td>59.24</td></tr>
<tr><td>3</td><td>2019-2020</td><td>39.15</td><td>39.15</td></tr>
<tr><td>4</td><td>2020-2021</td><td>20.76</td><td>20.76</td></tr>
<tr><td>5</td><td>2021-2022</td><td>35.61</td><td>35.61</td></tr>
<tr><td>6</td><td>2022-2023</td><td>-</td><td>-</td></tr>
</table>
ಪಾಲಿಕೆ ನಿಧಿಯಲ್ಲಿ ರೂ. 420.00 ಲಕ್ಷಗಳನ್ನು ಅನುವು ಮಾಡಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.</td>
</tr>
<tr>
<td>ಇ)</td>
<td>ಪಾರ್ಕ್ ಗಳು ಸರಿಯಾದ ನಿರ್ವಹಣೆ ಇಲ್ಲದೆ ಬಳಕೆಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td rowspan="2">ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಪಾರ್ಕ್ ಗಳನ್ನು ಗಾರ್ಡ್‌ನರ್, ಹೊರಗುತ್ತಿಗೆ ಗಾರ್ಡ್‌ನರ್, ಶಾಲಾ ಕಾಲೇಜು, ನಾಗರೀಕ ಹಿತರಕ್ಷಣೆ ಸಮಿತಿ ಹಾಗೂ ಕ್ಷೇಮಾಭಿವೃದ್ಧಿ ಸಂಸ್ಥೆಗಳಿಂದ ನಿರ್ವಹಣೆ ಮಾಡಲಾಗುತ್ತಿದೆ. ಪಾರ್ಕ್‌ಗಳಲ್ಲಿ ಉತ್ಪತ್ತಿಯಾಗುವ ಎಲೆ ಕಸವನ್ನು ಮೂಲದಲ್ಲಿಯೇ ಗೊಬ್ಬರ ತಯಾರಿಸಲು ಸುಮಾರು 30 ಉದ್ಯಾನವನಗಳಲ್ಲಿ ಎಲೆ ಗೊಬ್ಬರ ಘಟಕಗಳನ್ನು ಅಳವಡಿಸಿದ್ದು, ಉಳಿಕೆ ತ್ಯಾಜ್ಯವನ್ನು ಪಾಲಿಕೆಯ ಘನತ್ಯಾಜ್ಯ ನಿರ್ವಹಣೆಯ ವಾಹನಗಳಲ್ಲಿ ಕೇಂದ್ರೀಯ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಸಾಗಿಸಲಾಗುತ್ತಿದ್ದು, ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ಉದ್ಯಾನವನಗಳನ್ನು ವಾರ್ಷಿಕವಾಗಿ ಟೆಂಡರ್ ಕರೆದು ನಿರ್ವಹಿಸಲಾಗುತ್ತಿದೆ.</td>
</tr>
<tr>
<td>ಈ)</td>
<td>ಬಂದಿದ್ದಲ್ಲಿ, ನಿರ್ವಹಣೆ ಇಲ್ಲದಿರುವ ಪಾರ್ಕ್‌ಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td>
</tr>
</table>

ಸಂಖ್ಯೆ: ನಅಇ 35 ತುಮಪಾ 2023(ಇ)

13/07/2023

(ಬಿ.ಎಸ್.ಸುರೇಶ)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು